ಶ್ರೀ ಆರ್.ವಿ. ದೇಶಪಾಂಡೆ : ಬರೇ ಬಿಲ್‌ಗಳನ್ನು ತರುವುದೇ ಆಗಿದೆ. you can pull up the Government. Where is the Chief Minister? ಮುಖ್ಯ ಮಂತ್ರಿಗಳು ಎಲ್ಲಿದ್ದಾರೆ? ಬರಗಾಲದ ಬಗ್ಗೆ ಚರ್ಚೆ ಎಲ್ಲಿ ಹೋಯಿತು? ಡಾ: ನಂಜುಂಡಪ್ಪನವರ ವರದಿ ಬಗ್ಗೆ ಚರ್ಚೆ ಎಲ್ಲಿ ಹೋಯಿತು? ಮೇಲ್ಮನೆಯಲ್ಲಿ ಬರ ಇಲ್ಲವೆಂದು ಸಚಿವರು ಹೇಳಿ ಸಮಸ್ಯೆ ಸೃಷ್ಟಿ ಮಾಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸರ್ಕಾರದವರು ಬಿಲ್‌ಗಳನ್ನು ಮತ್ತೆ ತಂದಿದ್ದಾರೆ. ಬರಗಾಲ ಪರಿಸ್ಥಿತಿ ಬಗ್ಗೆ ಮತ್ತು ಡಾ: ನಂಜುಂಡಪ್ಪನವರ ವರದಿ ಬಗ್ಗೆ ಚರ್ಚೆ ಮಾಡುವುದು ಯಾವಾಗ? ಬರೇ ಬಿಲ್ ಬಗ್ಗೆ ತಂದಿದ್ದಾರೆ.

ಶ್ರೀ ಆಲ್ಕೋಡು ಹನುಮಂತಪ್ಪ : ಸರ್ಕಾರದ ಮಂತ್ರಿಗಳು ಕುಳಿತಿದ್ದಾರೆ. ಅವರು ಬರೆದುಕೊಳ್ಳುತ್ತಾರೆ. ಬರಗಾಲದ ಬಗ್ಗೆ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಮಸೂದೆಯ ಅಧಿವೇಶನವೇ ಅಥವಾ ವಿಶೇಷ ಅಧಿವೇಶನವೆ? ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಅಧಿವೇಶನವನ್ನು ಕರೆದು ಮೂರು ದಿವಸದಿಂದ ಈ ಸದನದಲ್ಲಿ ಇಲ್ಲ. ಇದು ಈ ಸದನಕ್ಕೆ ಮಾಡಿದಂಥ ಅಪಚಾರ. ಈ ರೀತಿ ಆಗಬಾರದು. ಇದು ಯಾವ ಮೊಸಳೆ ಕಣ್ಣೀರು? ಏನು ಬೆಳಗಾಂ ಬಗ್ಗೆ ಇವರು ಮಾಡುವುದು? ಏನು ಗಡಿ ಸಮಸ್ಯೆ ಬಗೆಹರಿಸುವುದು? ಈಗ ಉದ್ಭವಿಸಿರುವ ಸಮಸ್ಯೆ ಬಗೆಹರಿಸಿ. ಈ ಭಾಗದ ಜನರನ್ನು ಕಡೆಗಾಣಿಸಿದ್ದಾರೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿನಿರತರಾದರು)

(ಅಡಚಣೆ)

ಅಧ್ಯಕ್ಷರು : ಭೋಸ್‌ರಾಜ್‌ರವರೆ, ಏನು ನೀವು ಎಲ್ಲರನ್ನೂ ಸದನದ ಬಾವಿಗೆ ಬನ್ನಿ ಬನ್ನಿ ಎಂದು ಕರೆಯುವುದು? ಏನು ಮಾಡಬೇಕೆಂದು ನಾನು ಹೇಳುತ್ತೇನೆ. ಎಲ್ಲರೂ ಸದನದ ಬಾವಿಯಿಂದ ಹೋಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ. ಈ ರೀತಿ ಮಾಡುವುದು ಗೌರವ ಅಲ್ಲ. ಭೋಸರಾಜ್‌ರವರೆ ಇದು ಸರಿಯಲ್ಲ. (interruption) I won't endorse this

(ಅಡಚಣೆ)

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ತಾವು ಹೇಗೆ ನಡೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ, ಹಾಗು ತಾವು ಸದನವನ್ನು ನಿಯಂತ್ರಣಕ್ಕೆ ತರಬೇಕು. ಸಭಾ ಕಲಾಪ ಹೇಗೆ ನಡೆಯಬೇಕೋ ಆ ರೀತಿ ನಡೆಯುವಂತೆ ಮಾಡಬೇಕು.

(ಅಡಚಣೆ)

ಅಧ್ಯಕ್ಷರು: ದೇಶಪಾಂಡೆಯವರೆ, ಈ ರೀತಿ ನಡೆದುಕೊಳ್ಳುವುದು ಇದು ಯಾರಿಗೂ ಗೌರವ ತರುವುದಿಲ್ಲ. ಈಗ ಬರಗಾಲದ ಬಗ್ಗೆ ಚರ್ಚೆ ಮಾಡೋಣ. ನಾನು ಎಲ್ಲರಿಗೂ ಮಾತನಾಡಲು

ಅವಕಾಶ ಕೊಡುತ್ತೇನೆ. ಮಾನ್ಯ ಖರ್ಗೆಯವರು ಮಾತನಾಡಲಿ. ನಾನು ಮಂತ್ರಿಗಳನ್ನು ಕರೆಸುತ್ತೇನೆ. ದಯಮಾಡಿ ಸದನದ ಬಾವಿಯಲ್ಲಿರುವ ಎಲ್ಲ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಎನ್.ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ನಿನ್ನೆಯ ದಿವಸ ಮಾನ್ಯ ಚೆಲುವರಾಯಸ್ವಾಮಿಯವರು ಬಿ.ಜೆ.ಪಿ. ಶಾಸಕರನ್ನು ಕರೆದು ಕರೆದು ಏನೋ ಹೇಳುತ್ತಿದ್ದಾಗ ತಾವು ಅವರಿಗೆ ಏನನ್ನೂ ಹೇಳಲಿಲ್ಲ. ಇವೊತ್ತು ನಮ್ಮ ಭೋಸರಾಜ್ ರವರು ಬೇರೆಯವರನ್ನು ಸದನದ ಬಾವಿಗೆ ಬನ್ನಿ ಎಂದು ಕರೆದರೆ ಅದಕ್ಕೆ ಮಾತ್ರ ತಾವು ಆ ರೀತಿ ಕರೆಯುವುದು ಸರಿಯಲ್ಲವೆಂದು ಹೇಳುತ್ತೀರಿ. ನಿನ್ನೆ ಅವರಿಗೆ ಮಾತ್ರ ಹೇಳಲಿಲ್ಲ. ಏಕೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಬರೇ ಬಿಲ್ ಪಾಸ್ ಮಾಡಿಸಿಕೊಳ್ಳುತ್ತಿದ್ದಾರೆ.

(ಅಡಚಣೆ)

ಅಧ್ಯಕ್ಷರು: ಈ ಸದನಕ್ಕೆ ಗೌರವ ಇದೆ. ನಿಯಮಗಳಿವೆ. ಸದನದ ನಿಯಮದ ಉಲ್ಲಂಘನೆ ಮಾಡುವುದು ಸರಿಯಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ಈ ಸಮಯದಲ್ಲಿ ಈ ಸದನದಲ್ಲಿ ಇರಬೇಕಾದ ಮುಖ್ಯ ಮಂತ್ರಿಗಳು ಇಲ್ಲ, ಉಪ ಮುಖ್ಯಮಂತ್ರಿಗಳು ಇಲ್ಲ. ಸದನಕ್ಕೆ ಏನು ಮಾರ್ಯಾದೆ ಇದೆ?

ಶ್ರೀ ಆಲ್ಕೋಡು ಹನುಮಂತಪ್ಪ: ಮಾನ್ಯ ಅಧ್ಯಕ್ಷರೆ, ಡಾ:ನಂಜುಂಡಪ್ಪನವರ ವರದಿ ಬಗ್ಗೆ ಮಾತನಾಡಲಿ. ಹೈದ್ರಾಬಾದ್ ಕರ್ನಾಟಕದ ಬಗ್ಗೆ ಮಾತನಾಡಲಿ. ಬರೆದುಕೊಳ್ಳಲು ಮಂತ್ರಿಗಳು ನಾವಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಏಕೆ ಇಷ್ಟೊಂದು ಬಹಳ ಆತುರದಲ್ಲಿ ನಿಮಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆಂದರೆ, ಮೇಲ್ಮನೆಯಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಅನೇಕ ಶಾಸಕರು ನಿನ್ನೆಯ ದಿವಸ ಬರಗಾಲ ಪೀಡಿತ ಪ್ರದೇಶದ ಬಗ್ಗೆ ಚರ್ಚೆ ಮಾಡಿ ಅದರ ಬಗ್ಗೆ ಸೂಕ್ತವಾದ ಉತ್ತರ ಮತ್ತು ಜನರ ಸಮಸ್ಯೆಗೆ ಸ್ಪಂದನೆ ಮಾಡಬೇಕೆಂದು ನಿನ್ನೆಯ ದಿವಸ ಪ್ರಯತ್ನ ಮಾಡಿದರು. ಚರ್ಚೆ ಒಂದು ಗಂಟೆಯವರೆಗೂ ನಡೆಯಿತು. ಕೊನೆಗೆ ಒಂದು ಗಂಟೆಯಾದ ಮೇಲೆ ಕಂದಾಯ ಸಚಿವರು ಸ್ಪಂದನೆ ಮಾಡಬೇಕಾಗಿತ್ತು. ಅವರು ಬರಗಾಲ ಇಲ್ಲ, ನೀವು ಏಕೆ ಇಷ್ಟು ಕೂಗಾಡುತ್ತೀರಿ ಎಂದು ಪ್ರಸ್ತಾಪ ಮಾಡಿದಾಗ ಇಡೀ ಮೇಲ್ಮನೆಯಲ್ಲಿ ರಾತ್ರಿಯಿಂದ ಇಲ್ಲಿಯವರೆವಿಗೆ ಧರಣಿ ಕುಳಿತಿದ್ದಾರೆ. ಅದಕ್ಕಾಗಿ ತಾವು ದೊಡ್ಡ ಮನಸ್ಸು ಮಾಡಿ ಮಾನ್ಯ ಮುಖ್ಯ ಮಂತ್ರಿಗಳನ್ನು ಮಾನ್ಯ ಉಪ ಮುಖ್ಯಮಂತ್ರಿಗಳನ್ನು, ಕಂದಾಯ ಸಚಿವರನ್ನು ಕರೆಸಿ. ಇದು ವಿಶೇಷವಾದ ಅಧಿವೇಶನ ಎಂದು ಒಂದು ಕಡೆ ನೀವು ಹೇಳುತ್ತೀರಿ. ಇನ್ನೊಂದು ಕಡೆ ಸಮಸ್ಯೆಗೆ ಸ್ಪಂದನೆ ಮಾಡತಕ್ಕಂಥ ಕೆಲಸ ಮಾಡುತ್ತಿಲ್ಲ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಳೆದ ಎರಡು ದಿವಸಗಳಿಂದ ಡಾ:ನಂಜುಂಡಪ್ಪನವರ ವರದಿ ಮೇಲೆ ಬರಗಾಲದ ಬಗ್ಗೆ ಮಾತನಾಡಬೇಕೆಂದು ಎಲ್ಲರೂ ಕೂಗಿದರು.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚರ್ಚೆ ಮಾಡುವುದಕ್ಕೆ ನಾವು ಸಿದ್ದರಿದ್ದೇವೆ. ಸುಮಾರು 36 ಗಂಟೆ ಸದನ ನಡೆದರೆ ಮಾನ್ಯ ಮುಖ್ಯಮಂತ್ರಿಗಳು ಮೂರು ತಾಸು ಇದ್ದಾರಾ?

ಶ್ರೀ ಆಲೋಡು ಹನುಮಂತಪ್ಪ : ಬರಗಾಲದ ಬಗ್ಗೆ ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದೆ. ಇವರೆಲ್ಲರೂ ಮಾತನಾಡಲಿ ಸರ್ಕಾರ ಉತ್ತರ ಕೊಡುತ್ತದೆ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಮಾತನಾಡಬೇಕು, ದಯವಿಟ್ಟು ಮೇಲ್ಮನೆಯಲ್ಲಿ ಆ ಸಮಸ್ಯೆಯನ್ನು ಬಗೆಹರಿಸಲಿ.

ಒಬ್ಬರು ಮಾನ್ಯ ಸದಸ್ಯರು : ನಂಜುಂಡಪ್ಪ ವರದಿ ಬಗ್ಗೆ ಮಾತನಾಡುವುದಾದರೆ ದಯವಿಟ್ಟು ವೆಲ್‌ನಿಂದ ಹೊರಗೆ ಬರಬೇಕು.

ಅಧ್ಯಕ್ಷರು : ನಾನು ಈಗ ಮಾನ್ಯ ಮುಖ್ಯಮಂತ್ರಿಗಳು , ಉಪ ಮುಖ್ಯಮಂತ್ರಿಗಳು ಹಾಗೂ ರೆವಿನ್ಯೂ ಸಚಿವರು ಇಲ್ಲದೇ ಇದ್ದರೆ ಅವರನ್ನು ಆದಷ್ಟು ಬೇಗ ಕರೆಸುವುದಕ್ಕೆ ಚೀಫ್ ವಿಪ್ ಅವರಿಗೆ ಹೇಳುತ್ತೇನೆ. ಅವರು ಬರುತ್ತಾರೆ. ಈಗ ಮಾನ್ಯ ಖರ್ಗೆಯವರು ಈ ಚರ್ಚೆಯನ್ನು ಆರಂಭ ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಆಲೋಡು ಹನುಮಂತಪ್ಪ : ಅವರೆಲ್ಲಾ ವಿಧಾನಪರಿಷತ್ತಿನಲ್ಲಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ವಿಧಾನಪರಿಷತ್ತಿನಲ್ಲಿ ಚರ್ಚೆ ಇದೆ ಎಂದು ಅಲ್ಲಿ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರನ್ನು ಕರೆಸಿ ....

ಅಧ್ಯಕ್ಷರು: ಹೇಳಿ ಕಳಿಸುತ್ತೇನೆ, ಆರಂಭ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವತ್ತು ಕೊನೆ ದಿವಸ, ಅವರು ಬರಲಿಲ್ಲವೆಂದರೆ ಏನು ಮಾಡುವುದು? ಯಾರಿಗೆ ಹೇಳಬೇಕು?

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರ ಸಚಿವರನ್ನು ಆದಷ್ಟುಬೇಗ ಕರೆಯುವುದಕ್ಕೆ ಕಳುಹಿಸುತ್ತಿದ್ದೇನೆ. ಮಾತನಾಡಿ, ಅನೇಕ ಸದಸ್ಯರು ಮಾತನಾಡುವುದಕ್ಕೆ ತಮ್ಮ ಇಚ್ಛೆಯನ್ನು ವ್ಯಕ್ತ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: 8.30 ಗಂಟೆಗೆ ಬಂದು 9.00 ಗಂಟೆಗೆ ಇಲ್ಲಿ ಮೊಗಸಾಲೆಯಲ್ಲಿ ಕುಳಿತುಕೊಂಡು ಇಲ್ಲೆ ಇದ್ದೇವೆ ನಾವು.

ಅಧ್ಯಕ್ಷರು: ಆಯಿತು, ತಾವು ಆರಂಭ ಮಾಡಿ. ದಯಮಾಡಿ ನೀವೆಲ್ಲಾ ಆಸನಗಳಿಗೆ ಹೋಗಿ. ನಾನು ಕರೆಸುತ್ತೇನೆ. ಈ ರೀತಿಯಾದರೆ ಯಾರಿಗೂ ಗೌರವ ಬರುವುದಿಲ್ಲ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮೇಲ್ಮನೆಯಲ್ಲಿ ಪಾಪ ಅವರು ರಾತ್ರಿಯೆಲ್ಲಾ ಕುಳಿತಿದ್ದಾರೆ, ಅವರು ಮುಖ ತೊಳೆದುಕೊಂಡಿಲ್ಲ, ಸ್ನಾನ ಮಾಡಿಲ್ಲ ರೀಸಸ್‌ಗೆ ಹೋಗಿಲ್ಲ ಅಂತಹ ಪರಿಸ್ಥಿತಿಯಲ್ಲಿ ಅವರಿದ್ದಾರೆ. ನಾವೆಲ್ಲರೂ ಕೂಡ ಅದೇರೀತಿಯಾಗಿ ಅದನ್ನು ನೋಡಿಕೊಂಡು . .

ಅಧ್ಯಕ್ಷರು: ನಾನು ಕರೆಸುತ್ತೇನೆ.

ಶ್ರೀ ಆಲ್ಕೋಡು ಹನುಮಂತಪ್ಪ: ಮಾನ್ಯ ಅಧ್ಯಕ್ಷರೆ, ನಾವೆಲ್ಲಾ ಒಂಬತ್ತು ಜನ ಮಂತ್ರಿಮಂಡಲದ ಸದಸ್ಯರು ಇಲ್ಲಿದ್ದೇವೆ. ಸರ್ಕಾರ ಉತ್ತರ ಕೊಡುತ್ತದೆ. ಮಾನ್ಯ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳು ವಿಧಾನಪರಿಷತ್ತಿನಲ್ಲಿದ್ದಾರೆ. ಅವರು ವೆಲ್‌ನಿಂದ ಹೊರಗೆ ಬರಲಿ, ಸರ್ಕಾರ ಉತ್ತರ ಹೇಳುವಂತಹ ಸಂದರ್ಭದಲ್ಲಿ ಸಮಗ್ರವಾಗಿ ಉತ್ತರ ಹೇಳುತ್ತದೆ. ನಾವು ಮಂತ್ರಿಗಳು ಹಾಗೂ ಸದಸ್ಯರು ಇಲ್ಲಿ ಕುಳಿತಿದ್ದೇವೆ.

ಅಧ್ಯಕ್ಷರು: ಈಗಾಗಲೇ ಸಮಯವಾಗುತ್ತಾ ಇದೆ. ಮತ್ತೆ ಮತ್ತೆ ಈ ರೀತಿ ಮಾಡುವುದು ಸರಿಯಲ್ಲ. ದಯಮಾಡಿ, ನೀವು ಹಿರಿಯ ಸದಸ್ಯರಿದ್ದೀರಿ.

(ಅಡಚಣೆ)

ಶ್ರೀ ಆಲ್ಕೋಡು ಹನುಮಂತಪ್ಪ: ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ ಹಾಗೂ ನಂಜುಂಡಪ್ಪ ವರದಿ ಬಗ್ಗೆ ಚರ್ಚೆ ಮಾಡಲಿ.

(ಅಡಚಣೆ)

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಬರಗಾಲ ಒಂದು ಗಂಭೀರವಾದ ಸಮಸ್ಯೆ ಎನ್ನವುದನ್ನು ತಾವು ಒಪ್ಪಿಕೊಳ್ಳುತ್ತೀರಿ. ಸರ್ಕಾರವು ನಂಜುಂಡಪ್ಪ ವರದಿ ಬಗ್ಗೆ ಚರ್ಚೆ ಮಾಡಲಿ ಎಂದು ಹೇಳಿದ್ದು ಈಗ ತಾವೇ ಹೇಳಿದ್ದರಿಂದ ನಾವು ಇಲ್ಲಿ ಕುಳಿತಿದ್ದೆವೆ; ನಿಮ್ಮ ಬಗ್ಗೆ ಗೌರವ ಕೊಡಬೇಕು. ಇವತ್ತು ಇಲ್ಲಿ ಫ್ರೆಂಟ್ ಬೆಂಚ್‌ನಲ್ಲಿ ಯಾರೂ ಇಲ್ಲ. ಇದು ತಮಗೆ ಗೌರವವೇ, ತಾವು ವಿಚಾರ ಮಾಡಿ. ಮೂರು ದಿವಸದ ಸದನ ನಡೆದಾಗ ಸಿ.ಎಂ. ರವರು ಎಷ್ಟು ಹೊತ್ತಿಗೆ ಬಂದಿದ್ದಾರೆ. ಅವರು ಅಡಿಗಲ್ಲು ಹಾಕಲಿ, ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಅಡಿಗಲ್ಲು ಹಾಕಿದರೆ, ಅದು ಕಾರ್ಯರೂಪಕ್ಕೆ ಬರಬೇಕಲ್ಲಾ. ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ, ಸರ್ಕಾರ ಏನು ಹೇಳಿತು ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ, ನಂಜುಂಡಸ್ವಾಮಿ ಬಗ್ಗೆ ಚರ್ಚೆ ಮಾಡುವುದಕ್ಕೆ ಕೆಲವು ಕಾಂಗ್ರೆಸ್ ಅಡ್ಡಬರುತ್ತಿದೆ ಎಂದು ಕೆಲವು ಪತ್ರಿಕೆಗಳು ಬರೆದವು. ಆದರೆ ಇವತ್ತು ಯಾರು ಅಡ್ಡ ಬರುತ್ತಿದ್ದಾರೆ? ಪ್ರತಿದಿನ ತಾವು ಅಜೆಂಡಾ ನೋಡಿ, ಎಲ್ಲಾ ಸರ್ಕಾರಿ ಕಾರ್ಯಕಲಾಪಗಳು. ಕೊನೆಗೆ ಬರಗಾಲದ ಬಗ್ಗೆ .... ಇದುಸರಿಯೇ? ತಾವು ವಿಚಾರ ಮಾಡಿ. ಸರ್ಕಾರ ಬಿಲ್ ಪಾಸ್

ಮಾಡಿಕೊಳ್ಳಬೇಕು, ನಿಜ, ಆದರೆ ಬರಗಾಲದ ಬಗ್ಗೆ ಮಹತ್ವವಿಲ್ಲ, ಉತ್ತರ ಕರ್ನಾಟಕದ ಬಗ್ಗೆ ಮಹತ್ವವಿಲ್ಲ. ಕೇವಲ ನಾಟಕ ಮಾಡುವುದಕ್ಕೆ. . . .

(ಅಡಚಣೆ)

ಶ್ರೀ ಆಲ್ಕೋಡು ಹನುಮಂತಪ್ಪ: ನೀವು ನಾಟಕ ಮಾಡುತ್ತಿರುವುದು. ನೀವು ಬಯಲಾಟ.....

(ಅಡಚಣೆ)

ಶ್ರೀ ಆಲ್ಕೋಡು ಹನುಮಂತಪ್ಪ : ನಾವ್ಯಾರೂ ಮಂತ್ರಿಮಂಡಲದ ಸದಸ್ಯರಲ್ಲವೆ? ನಾವು ಸರ್ಕಾರ ಅಲ್ಲವೆ? ಮಾತನಾಡಿ.

(ಅಡಚಣೆ)

ಶ್ರೀ ಆಲ್ಕೋಡು ಹನುಮಂತಪ್ಪ : ನಿಮ್ಮ ಸಂಖ್ಯೆ ನೋಡಿ ಹಿಂದುಗಡೆ ಗೊತ್ತಾಗುತ್ತದೆ.

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಈಗ ದೇಶಪಾಂಡೆ ಸಾಹೇಬರು ಮಾತನಾಡುತ್ತಿದ್ದೀರಲ್ಲಾ, ನೀವೆಲ್ಲಾ ಇಲ್ಲೆ ಇದ್ದಾಗ ಸದನದಲ್ಲೇ ಇದ್ದಿರಾ ಸ್ವಾಮಿ? ನೀವು ರೆವಿನ್ಯೂ ಮಂತ್ರಿಯಾಗಿದ್ದಾಗ ನೀವು ಯಾರೂ ಇರಲಿಲ್ಲ. ನಾವು ಚರ್ಚೆ ಮಾಡಿದೆವು. ಬರಗಾಲ ಬಂದಾಗ ಚರ್ಚೆ ಮಾಡಿದೆವು. ನಂಜುಂಡಪ್ಪ ವರದಿ ಬಗ್ಗೆ ಚರ್ಚೆ ಮಾಡಿದೆವು, ನೀವು ಯಾರೂ ಆಗ ಪತ್ತೇನೇ ಇರಲಿಲ್ಲ. ಈಗ ರೆವಿನ್ಯೂ ಮಂತ್ರಿಯವರು ಬರುತ್ತಾರೆ, ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ತಾವು ಈಗ ಚರ್ಚೆ ಮಾಡಿ. ಚರ್ಚೆ ಮಾಡಿ, ಚರ್ಚೆ ಮಾಡುವುದು ಯಾರೂ ಬೇಡವೆಂದು ಹೇಳಿಲ್ಲ. ನೀವು ಚರ್ಚೆ ಮಾಡಿ. ಬರೆದುಕೊಳ್ಳುವುದಕ್ಕೆ ನಾವು ಮಂತ್ರಿಗಳು ಇಲ್ಲಿದ್ದೇವೆ. ನಾವು ತಯಾರಿದ್ದೇವೆ.

ಶ್ರೀ ಎನ್. ಧರ್ಮಸಿಂಗ್ : ಈಗ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳಿಲ್ಲ.

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು ಬರುತ್ತಿದ್ದಾರೆ. ಬೇರೆ ಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳನ್ನೆಲ್ಲಾ ಕರೆಸುತ್ತೇನೆ.

ಶ್ರೀ ಎನ್. ಧರ್ಮಸಿಂಗ್: ಬರಲಿ, ಅವರು ಬಂದಮೇಲೆ ಚರ್ಚೆ ಮಾಡುವುದು.

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು: ನೀವು ಚರ್ಚೆ ಮಾಡಿ. ಇಲ್ಲಿ ನಾವಿದ್ದೇವೆ. ಎಷ್ಟು ಜನ ಮಂತ್ರಿಗಳಿದ್ದೇವೆ ನೋಡಿ. ನಾವು ಬರೆದುಕೊಳ್ಳುವುದಕ್ಕೆ ತಯಾರಿದ್ದು, ಸರ್ಕಾರ ಉತ್ತರ ಕೊಡುತ್ತದೆ, ನೀವು ಚರ್ಚೆ ಮಾಡಿ.

ಶ್ರೀ ಎನ್.ಧರ್ಮಸಿಂಗ್: ಇಲ್ಲಿ ಸರಿಯಾದ ರೀತಿಯಲ್ಲಿ ಚರ್ಚೆಯಾಗಬೇಕಾದರೆ ಇವತ್ತು ಎಲ್ಲಾ ಮಂತ್ರಿಗಳು ಫ್ರೆಂಟ್ ಬೆಂಚ್‌ನಲ್ಲಿ ಕುಳಿತುಕೊಳ್ಳಬೇಕು.

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು: ಚರ್ಚೆ ಮಾಡಿ ಸ್ವಾಮಿ, ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ನೀವು ಹೇಳಿದ್ದೆಲ್ಲಾ ಕೇಳಿಸಿಕೊಳ್ಳುವುದಕ್ಕೆ ತಯಾರಿದ್ದೇವೆ. ಬರೆದುಕೊಳ್ಳುವುದಕ್ಕೆ ತಯಾರಿದ್ದೇವೆ. ಚರ್ಚೆ ಮಾಡಲಿ, ಬಾವಿಯೊಳಗೆ ಏನು ಚರ್ಚೆ ಮಾಡುತ್ತೀರಿ? ಹೊರಗೆ ಬಂದು ಚರ್ಚೆ ಮಾಡಿ. ನಾವು ಬರೆದುಕೊಳ್ಳುತ್ತೇವೆ ತಮಗೆ ಉತ್ತರ ಕೊಡುತ್ತೇವೆ. ಉತ್ತರ ಕೊಡುವುದಿಲ್ಲವೆಂದು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ಈ ಅಧಿವೇಶನ ಕರೆದಾಗ ಇಲ್ಲಿ ಪ್ರೊಸೀಡಿಂಗ್ಸ್ ನಡೆಯುವಾಗ, ನಾವೆಲ್ಲರೂ 9.30ಕ್ಕೆ ಸೇರಬೇಕೆಂದು ಆದೇಶ ಕೊಟ್ಟಮೇಲೆ ಕನಿಷ್ಟ ಪಕ್ಷ ಕೊನೆ ದಿವಸ ಇವತ್ತು ಎಲ್ಲರೂ ಇದ್ದು ನಾವು ಮಾತನಾಡಿದಾಗ ಆ ಚರ್ಚೆಗೆ ಉತ್ತರವನ್ನು ಕೊಡಬೇಕಾದುದು ಅವರ ಕರ್ತವ್ಯ ಹೌದೋ ಅಲ್ಲವೋ? ಇದು ಒಂದು ವಿಚಾರ. ಇನ್ನು ಎರಡನೆಯದಾಗಿ, ಇಲ್ಲಿ ಸದನ ನಡೆದಿದೆ ಅಲ್ಲಿ ಅವರು ಅಡಿಗಲ್ಲು ಸಮಾರಂಭವನ್ನು ಮಾಡುತ್ತಾ ಹೊರಗಡೆ ಇದ್ದರೆ ಇದು ಶೋಭೆ ತರುತ್ತದೇನು ತಾವೇ ಹೇಳಿ? ಇನ್ನು ಮೂರನೆಯದಾಗಿ ಅಡಿಗಲ್ಲು ಏನು ಮಾಡುತ್ತಿದ್ದಾರೆ, ಅದಕ್ಕೆ ಈ ಸಪ್ಲಿಮೆಂಟರಿ ಬಜೆಟ್‌ನಲ್ಲೂ ಮೂರನೇ ಒಂದು ಪ್ರಾವಿಜನ್ ಮಾಡಿಲ್ಲ. ಅಡ್ಮಿನಿಸ್ಟೇಟಿವ್ ಅಪ್ರೂವಲ್ ಪ್ರಶ್ನೆ ಕೂಡ ಆಗ ಬರುವುದಿಲ್ಲ. ಏಕೆಂದರೆ ಎಲ್ಲಿಯವರೆಗೆ 1/3 ಪ್ರಾವಿಜನ್ ಮಾಡುವುದಿಲ್ಲ ಅಲ್ಲಿಯವರೆಗೂ ಬರುವುದಿಲ್ಲ. ಆದರೂ ಕೂಡ ಇವತ್ತು ಅವರು ಹೋಗಿ ಅಡಿಗಲ್ಲು ಹಾಕುತ್ತಿದ್ದಾರೆಂದರೆ, ಎಷ್ಟರಮಟ್ಟಿಗೆ ಈ ಭಾಗದ ಜನತೆಗೆ ಅವರು ದ್ರೋಹ ಮಾಡುತ್ತಿದ್ದಾರೆ ಎನ್ನುವುದನ್ನು ತಾವೇ ಯೋಚನೆ ಮಾಡಿ. ಅದನ್ನು ನಾನು ಹೇಳಬೇಕಾಗಿಲ್ಲ.

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು: ಬಳ್ಳಾರಿಯಲ್ಲಿ ಮೂರು ಸಾವಿರ ಕೋಟಿ ರೂಪಾಯಿ ಅಡಿಗಲ್ಲು ಏನಾಯಿತು? ಬಳ್ಳಾರಿಯಲ್ಲಿ ಸೋನಿಯಾ ಗಾಂಧಿಯವರು ಅಡಿಗಲ್ಲು ಹಾಕಿದರಲ್ಲಾ ಅವೆಲ್ಲಾ ಏನಾಯಿತು? ಬಳ್ಳಾರಿ ವಿಚಾರ ತೆಗೆಯಿರಿ? ಬಳ್ಳಾರಿಯಲ್ಲಿ ಮೂರು ಸಾವಿರ ಕೋಟಿ ರೂಪಾಯಿಯ ಅಡಿಗಲ್ಲು ಹಾಕಿದಿರಲ್ಲಾ, ಆಗ ಯಾವ ಅಡ್ಮಿನಿಸ್ಟೇಟೀವ್ ಅಪ್ರೂವಲ್ ಕೊಟ್ಟಿದ್ದಿರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅನೇಕ ವಿಚಾರಗಳಲ್ಲಿ ಈ ರೀತಿಯಾಗಿ ಏನು ಆಶ್ವಾಸನೆ ಕೊಡುತ್ತಿದ್ದಾರೆ, ಅದಕ್ಕೆ ಯಾವುದಕ್ಕೂ ಕೂಡ ಬಜೆಟ್ ಬ್ಯಾಂಕಿಂಗ್ ಇಲ್ಲ, ಪ್ರಾವಿಜನ್ ಇಲ್ಲ. ಅದಕ್ಕೆ ಇಂತಹ ಒಂದು ಸಂದರ್ಭದಲ್ಲಿ ಅವರು ಬಂದು ಉತ್ತರ ಕೊಟ್ಟರೆ ಅದಕ್ಕೆ ಒಂದು ಮಹತ್ವ ಇರುತ್ತದೆ. ಯಾವಯಾವ ಪ್ರಾವಿಜನ್‌ನಲ್ಲಿ ಏನೇನು ಮಾಡಿದ್ದಾರೆ. . . .

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : ಬಳ್ಳಾರಿ ಜಿಲ್ಲೆಯಲ್ಲಿ ಅವತ್ತು ಹಾಕಿದರಲ್ಲಾ

ಅಧ್ಯಕ್ಷರು : ಬರುತ್ತಿದ್ದಾರೆ . . . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಸಾರ್, ಅವರು ಎಲ್ಲಾ ಬಿಜಿ, ನಿಮ್ಮನ್ನೂ ಸಹ ಕರೆದಿಲ್ಲ, ಈಗ ಹೋಗಿ ಅಡಿಗಲ್ಲು ಹಾಕಿಕೊಂಡು ಬರುವುದಕ್ಕೆ ಹೋಗಿದ್ದಾರೆ. ಇದು ಹಿಸ್ಟಾರಿಕಲ್ ಸೆಷನ್ ಎಂದು ಹೇಳುವುದು, ಕದ್ದು ಕದ್ದು ಕಲ್ಲು ಹಾಕುವುದು ಎಂದರೆ ಏನರ್ಥ?

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : ಅವತ್ತು ಬಳ್ಳಾರಿಯಲ್ಲಿ ಅಡಿಗಲ್ಲು ಹಾಕಿದರಲ್ಲಾ ಅವತ್ತು ಯಾವ ಅಡ್ಮಿನಿಸ್ಟೇಟಿವ್ ಅಪ್ರೂವಲ್ ಸಿಕ್ಕಿತ್ತು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂದರೆ ಈ ಸದನಕ್ಕೆ ಏನೂ ಬೆಲೆ ಇಲ್ಲವೆಂದ ಹಾಗಾಯಿತಲ್ಲಾ ನಿಮಗೆ ಬೆಲೆ ಇಲ್ಲ, ನಮಗೆ ಬೆಲೆ ಇಲ್ಲ, ಸದನದಲ್ಲಿ ಇರತಕ್ಕಂಥ ಸದಸ್ಯರಿಗೆ ಬೆಲೆ ಇಲ್ಲ. ಏಕೆ ಕರೆಯಬೇಕು? ಇನ್ನೊಂದು ದಿವಸ ಮಾಡಿಕೊಳ್ಳಿ.

(ಅಡಚಣೆ)

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದಕ್ಕೆ ಇವರಿಗೆ ಇಷ್ಟವಿಲ್ಲ. ನಂಜುಂಡಪ್ಪ ವರದಿ ಬಗ್ಗೆ ಚರ್ಚೆ ಮಾಡುವುದಕ್ಕೆ ಇಷ್ಟವಿಲ್ಲ. ನಾಟಕ... ಇದೆಲ್ಲಾ ಜನ ನೋಡುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಸದನ ಏಕೆ ಎಕ್ಸ್‌ಟೆಂಡ್ ಆಯಿತು? ಬರಗಾಲದ ಬಗ್ಗೆ ಮತ್ತು ನಂಜುಂಡಪ್ಪ ವರದಿ ಬಗ್ಗೆ ಚರ್ಚೆ ಮಾಡುವುದಕ್ಕೆ. ಆದರೆ ಬರಗಾಲ ನಂಜುಂಡಸ್ವಾಮಿ ಉತ್ತರ ಕರ್ನಾಟಕ ಅಭಿವೃದ್ಧಿ ಬಗ್ಗೆ.

ಅಧ್ಯಕ್ಷರು : ನೂರು ಸಲ ಹೇಳಿದರೂ ನೀವು ಕೇಳುವುದಿಲ್ಲ. ನಿಮಗೆ ಇಷ್ಟ ಬಂದ ರೀತಿಯಲ್ಲಿ ನೀವು ನಡೆದುಕೊಳ್ಳುತ್ತೀರಿ?

ಶ್ರೀ ಆರ್.ವಿ. ದೇಶಪಾಂಡೆ: ನಾವು ತಮಗೂ ವಿನಂತಿ ಮಾಡುತ್ತೇವೆ, ತಾವು ಸರಿ ಇದ್ದರೆ ಸರಿಯೆಂದು ಹೇಳಿ.

ಅಧ್ಯಕ್ಷರು : ನಿಮ್ಮ ವಿಚಾರಗಳನ್ನು ಏನು ಹೇಳಬೇಕೋ ಹೇಳಿ ನಾನು ತೀರ್ಪನ್ನು ಕೊಟ್ಟಮೇಲೆ ತಾವು ಆ ರೀತಿಯಾಗಿಯೇ ನಡೆದುಕೊಳ್ಳಬೇಕು. ಆದರೆ ನೀವು ಹೇಳಿದ ಹಾಗೆ ನಾನು ನಡೆಯಬೇಕು ಎಂದು ಗುತ್ತಿಗೆ ತೆಗೆದುಕೊಂಡವರ ಹಾಗೆ ನಡೆದುಕೊಳ್ಳುತ್ತಿದ್ದೀರಿ. ಇದು ಸರಿ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಹಾಗೆ ನಾವು ಹೇಳುವುದಿಲ್ಲ. ನಿಮ್ಮ ಬಗ್ಗೆ ಗೌರವ ಇದೆ.

ಅಧ್ಯಕ್ಷರು: ಇದು ಯಾರಿಗೂ ಶೋಭೆ ತರುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ರೆವಿನ್ಯೂ ಮಿನಿಸ್ಟರ್ ಇಲ್ಲ. ಫ್ರಂಟ್ ಬೆಂಚ್‌ನಲ್ಲಿ ಯಾರೂ ಇಲ್ಲ. ರೆವಿನ್ಯೂ ಮಿನಿಸ್ಟರ್ ಇರಬೇಕು, ಅವರೂ ಇಲ್ಲ.

ಶ್ರೀ ಆಲ್ಕೋಡು ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ, ಅವರು ಬರಗಾಲದ ಬಗ್ಗೆ ಮಾತನಾಡಲಿ.

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು: ಬರಗಾಲದ ಬಗ್ಗೆ ಮಾತನಾಡುವುದಕ್ಕೆ ನಮ್ಮದೇನೂ ಅಡ್ಡಿಯಿಲ್ಲ. ಅಡಿಗಲ್ಲು ಹಾಕಿದ್ದು ತಪ್ಪಲ್ಲ. ಬಳ್ಳಾರಿಯಲ್ಲಿ ಶ್ರೀಮತಿ ಸೋನಿಯಾ ಗಾಂಧಿಯವರು ಮೂರು ಸಾವಿರ ಕೋಟಿ ರೂಪಾಯಿಯ ಅಡಿಗಲ್ಲು ಹಾಕಿದರು. ಅದು ಏನಾಯಿತೋ ಗೊತ್ತಿಲ್ಲ. ಅದಕ್ಕೆ ಅಡ್ಮಿನಿಸ್ಟೇಟಿವ್ ಅಪ್ರೂವಲ್ ಎಷ್ಟು ಸಿಕ್ಕಿತೋ ಗೊತ್ತಿಲ್ಲ. ಆದರೆ ಇವತ್ತು ಅಡಿಗಲ್ಲು ಮತ್ತು ಅಡ್ಮಿನಿಸ್ಟೇಟಿವ್ ಅಪ್ರೂವಲ್ ಬಗ್ಗೆ ತಾವು ಮಾತನಾಡುತ್ತಿದ್ದೀರಿ. ಸಂತೋಷ. ಆದರೆ ಅವತ್ತು ಬಳ್ಳಾರಿಯಲ್ಲಿ ಮೂರು ಸಾವಿರ ಕೋಟಿ ರೂಪಾಯಿಗೆ ಅಡಿಗಲ್ಲು ಹಾಕಿದರಲ್ಲ . . . .

ಶ್ರೀ ಆರ್.ವಿ. ದೇಶಪಾಂಡೆ : ಅವರು ಕೈಗಾರಿಕಾ ಸಚಿವರು ಏನು ಮಾತನಾಡುತ್ತಿದ್ದಾರೆ ಎಂಬುದು ಅವರಿಗೆ ಗೊತ್ತಿಲ್ಲ. ಬಳ್ಳಾರಿಯಲ್ಲಿ ಅಡಿಗಲ್ಲು ಹಾಕಿದ್ದೇವೆ, ಜಾರಿಗೆ ಬಂದಿವೆ, ಕಾರ್ಯಕ್ರಮಕ್ಕೆ ನಾಂದಿ ಸಿಕ್ಕಿದೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ದೇಶಪಾಂಡೆಯವರೆ, ಗುಲ್ಬರ್ಗದಲ್ಲಿ ಪ್ಯಾಕೇಜ್‌ಗಳು ಮಾಡಿದ್ದು ಎಲ್ಲಿ ಹೋದವು? ನಿಮ್ಮ ಪ್ಯಾಕೇಜ್‌ಗಳು ಏನಾಯಿತು. ಎಂಬುದು ಎಲ್ಲರಿಗೂ ಗೊತ್ತಿದೆ.

ಶ್ರೀ ಕಟ್ಟಾ ಸುಬ್ರಮ್ಮಣ್ಯ ನಾಯ್ಡು : ದೇಶಪಾಂಡೆ ಸಾಹೇಬರೇ, ನೀವು ಏನೇನು ಮಾಡಿದಿರಿ ಅಷ್ಟೆಲ್ಲಾ ನನಗೆ ಮಾಡುವುದಕ್ಕೆ ಬರುವುದಿಲ್ಲ. ನೀವು ಹತ್ತು ವರ್ಷ ಇಂಡಸ್ಟ್ರೀ ಸಚಿವರಾಗಿದ್ದಿರಿ, ನಿಮ್ಮ ತರಹ ಮಾಡುವುದಕ್ಕೆ ನನಗೆ ಬರುವುದಿಲ್ಲ. ನಿಮ್ಮಷ್ಟು ಬುದ್ಧಿ ನಮಗಿಲ್ಲ. ನಿಮ್ಮ ಕೈಚಳಕ ನನಗಿಲ್ಲ. ನಿಮ್ಮಷ್ಟು ಕೆಲಸಗಳನ್ನು ಮಾಡುವುದಕ್ಕೆ ನನ್ನ ಕೈಯಲ್ಲಿ ಆಗುವುದಿಲ್ಲ. ನನಗೆ ಗೊತ್ತಿದೆ ನಾನು ಹೇಳುತ್ತೇನೆ. ನಾನು ಅದನ್ನೂ ಹೇಳುತ್ತೇನೆ ನನಗೆ ಗೊತ್ತಿಲ್ಲ ಅದೆಲ್ಲಾ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಿಮ್ಮ ಬಗ್ಗೆ ಗೌರವ ಇದೆ.

(ಅಡಚಣೆ)

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಈಗಾಗಲೇ 50ನಿಮಿಷಗಳು ತಡವಾಗಿದೆ. ದಯಮಾಡಿ ತಾವೆಲ್ಲರೂ ತಮ್ಮ ಸ್ಥಳಗಳಿಗೆ ಹೋಗಿ, ಚರ್ಚೆ ಆರಂಭವಾಗಲಿ, ನಾನು ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ದಯಮಾಡಿ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ.

(ಬಾವಿಯಲ್ಲಿ ಧರಣಿ ಮಾಡುತ್ತಿದ್ದ ಕಾಂಗ್ರೆಸ್ ಶಾಸಕರು ತಮ್ಮ ಸ್ಥಾನಗಳಿಗೆ ಹೋದರು)

ಒಬ್ಬ ಮಾನ್ಯ ಸದಸ್ಯರು : ಏನು ಮಾಡುತ್ತಿದ್ದಾರೆಂಬುದನ್ನು ಜನರು ನೋಡುತ್ತಿದ್ದಾರೆ. ಪ್ರತಿ ದಿನ ಧರಣಿ, ಸಮಯ ಹಾಳು, ದಿನಾ ನಾಟಕ.

ಶ್ರೀ ಹೆಚ್.ಡಿ.ಬಸವರಾಜು : ಜನ ನೋಡುತ್ತಿದ್ದಾರೆ, ಜನ ತೀರ್ಮಾನ ಕೊಡುತ್ತಾರೆ. ಇದು ಅಭಿವೃದ್ಧಿ ಮಾಡುವುದಾ? ಇದು ಅಭಿವೃದ್ದಿನಾ? ಇದೆನಾ ಅಭಿವೃದ್ದಿ?

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಸದನವನ್ನು 9.30ಗಂಟೆಗೆ ಕರೆದಿದ್ದೀರಿ. ಇವರಿಗೆ ಬೇರೆ ಕಾರ್ಯಕ್ರಮ ಇರಬಹುದು, ಹೋಗಿರಬಹುದು, ಇವತ್ತು ಇಲ್ಲಿ ಬರದ ಬಗ್ಗೆ ಚರ್ಚೆಯಾಗುತ್ತಿದೆ. ಬರಗಾಲದ ಬಗ್ಗೆ ಮತ್ತು ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ಚರ್ಚೆಯಾಗಬೇಕೆಂದು ಅಧ್ಯಕ್ಷರು ಎರಡು ದಿವಸಗಳ ಕಾಲ ಸದನದ ಕಾರ್ಯಕಲಾಪಗಳನ್ನು ಮುಂದುವರೆಸಬೇಕೆಂದು ಹೇಳಿದರು. ಅದಕ್ಕೆ ನಾವು ಒಪ್ಪಿದೆವು. ನಿನ್ನೆ ಕೂಡ ಡಾ:ನಂಜುಂಡಪ್ಪನವರ ವರದಿಯ ಬಗ್ಗೆ ಮತ್ತು ಬರಗಾಲದ ಬಗ್ಗೆ, ಕೆಲವರು ಬೆಳಗಾಂ ಶಾಸಕರು ಮತ್ತು ಬೇರೆ ಶಾಸಕರು, ನಮ್ಮ ಪಕ್ಷದ ಶಾಸಕರೂ ಕೂಡ ಮಾತನಾಡಿದ್ದಾರೆ. ಇವತ್ತು ನಮ್ಮ ಪಕ್ಷದ ಅಧ್ಯಕ್ಷರು ಕೂಡ ಮಾತನಾಡಬೇಕಾಗಿದೆ, ಮತ್ತೆ ಫ್ಲೋರ್ ಲೀಡರ್ಸ್ ಕೂಡ ಮಾತನಾಡಬೇಕಾಗಿದೆ. ನಾವು ಈಗ ಹೇಳುವಂತಹ ವಿಷಯವೇನೆಂದರೆ, ನಿನ್ನೆ ವಿಧಾನಪರಿಷತ್ತಿನಲ್ಲಿ ಒಂದು ಗಂಟೆಗಳ ಕಾಲ ಚರ್ಚೆಯಾಯಿತು, ಅಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮತ್ತೆ ಬೇರೆ ಸಚಿವರು ಇದ್ದರು.